ದಿನಾಂಕ: **07.08.2026** ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.
ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್ ಕೆ ಕೆ ವಕೀಲರಿಂದಃ

ನಾನು 10 ನೇ ತರಗತಿಯ ನಂತರ ಐ ಟಿ ಐ ಓದಿರುತ್ತೇನೆ. ನನ್ನ ತಂದೆ ತಾಯಿಗೆ ಮೂರು ಜನ ಮಕ್ಕಳು. ನಾವು ಅಕ್ಕಿ ಆಲೂರಿನಲ್ಲಿ ವಾಸವಾಗಿದ್ದೇವೆ. ಶ್ರೀ ಬಸವೇಶ್ವರ ಕೃಷಿ ಕೇಂದ್ರ ಪ್ರೊಪ್ರೈಟರ್ ಅಂಗಡಿ ನನ್ನ ಹೆಸರಿನಲ್ಲಿದೆ. ಸದರಿ ಅಂಗಡಿಯನ್ನು ಪ್ರಾರಂಭಿಸಿ 35 ವರ್ಷಗಳು ಕಳೆದಿವೆ ಸದರಿ ಅಂಗಡಿಯನ್ನು ನಮ್ಮ ತಂದೆ ನಡೆಸುತ್ತಿದ್ದರು. ನಮ್ಮ ತಂದೆ 2021 ರಲಲ್ ಸಾಲಿನಲ್ಲಿ ತೀರಿಕೊಂಡಿರುತ್ತಾರೆ. ಸದರಿ ಸಮಯದಲ್ಲಿ ಸದರಿ ಅಂಗಡಿ ನನ್ನ ತಂದೆಯ ಹೆಸರಿನಲ್ಲಿತ್ತು ಅವರು ತೀರಿಕೊಂಡ ನಂತರ ಅದು ನನ್ನ ಹೆಸರಿಗೆ ವರ್ಗಾವಣೆಯಾಗಿರುತ್ತದೆ.

2. ಸದರಿ ಅಂಗಡಿ ನಡಸೆಲು ಪರವಾನಿಗೆ ನನ್ನ ಹೆಸರಿನಲ್ಲಿ ಇದೆ. ಸದರಿ ಅಂಗಡಿ ಇರುವ ಜಾಗ ನನ್ನ ತಾಯಿ ಹಾಗೂ ನನ್ನ ಹಾಗೂ ನನ್ನ ಸಹೋದರರ ಜಂಟಿ ಹೆಸರಿನಲ್ಲಿದೆ. ಸದರಿಯವರನ್ನು ಬಿಟ್ಟು ಬೇರೆ ಯಾರ ಹೆಸರಿನಲ್ಲಿಯೂ ಸಹ ಸದರಿ ಜಾಗ ಇಲ್ಲ. ಸದರಿ ಅಂಗಡಿ ಜಾಗ ನನ್ನ ಚಿಕ್ಕಪ್ಪ ನ ಮಕ್ಕಳಾದ ಮಲ್ಲನಗೌಡ ಪಾಟೀಲ ಮತ್ತು ಸುರೇಶಗೌಡ ಪಾಟೀಲ ರವರ ಜಂಟಿ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಸದರಿ ಆಸ್ತಿಗೆ ಸಂಬಂಧಿಸಿದಂತೆ ಹಿರಿಯ ದಿವಾಣಿ ನ್ಯಾಯಾಲಯ ಹಾನಗಲ್ ದಲ್ಲಿ ಅಸಲು ದಾವಾ ಸಂಖ್ಯೆ01/2022 ದಾವೆ ಚಾಲ್ತಿಯಲ್ಲಿ ಇದೆ ಎಂದರೆ ಸರಿ.

3. ಕೃಷಿ ಕೇಂದ್ರವನ್ನು ಪ್ರಾರಂಭಿಸಲು ರೈತರಿಗೆ ಮಾತ್ರ ಸರಕಾರದವರು ಅವಕಾಶ ಕೊಟ್ಟಿರುತ್ತಾರೆ ಎಂದರೆ ಸರಿ. ನಾನು ಬಿ ಎಸ್ಸಿ ಅಗ್ರಿ ಪದವಿ ಹೊಂದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ರಸಗೊಬ್ಬರ ಅಂಗಡಿ ಹೊಂದಲು ಬೇಕಾದ ಒಂದು ವರ್ಷದ ಬೇಸಿಕ್ ಕೋರ್ಸನ್ನು ನಾನು ಮುಗಿಸಿರುತ್ತೇನೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಅದೇ ರೀತಿ 15 ದಿನಗಳ ಒಂದು ಕೋರ್ಸನ್ನು ಸಹ ಮುಗಿಸಿರುತ್ತೇನೆ ಎನ್ನುತ್ತಾರೆ. ಸದರಿ ಕೃಷಿ ಕೇಂದ್ರವನ್ನು ಪ್ರಾರಂಭಿಸಲು ಬಿ ಎಸ್ಸಿ ಅಗ್ರಿ ಪದವಿ ಹೊಂದಿರಬೇಕು ಎಂದರೆ ಸರಿಯಲ್ಲ. ಸದರಿ ಪದವಿ ಪಡೆಯದೇ ಇದ್ದರೆ ಸದರಿ ಅಂಗಡಿ ನೆಡಸಲು ಸರಕಾರದವರು ಲೈಸನ್ಸ ನೀಡುವುದಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಕೃಷಿ ಕೇಲಂದ್ರ ನಡೆಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ಕೋರ್ಸ ಮುಗಿಸಿಲ್ಲ ಆದರೂ ಸಹ ಮುಗಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ಒಂದು ವರ್ಷದ ಕೋರ್ಸ ಮುಗಿಸಿರುವ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಹಾಜರು ಪಡಿಸಬಲ್ಲೇ ಎನ್ನುತ್ತಾರೆ.

4. ಆರೋಪಿ ನನಗೆ ಕಳೆದ 2-3 ವರ್ಷಗಳಿಂದ ಪರಿಚಯಸ್ಥ. ಆತನ ಬಗ್ಗೆ ನನಗೆ ಗೊತ್ತಿತ್ತು ಆದರೆ 2-3 ವರ್ಷಗಳಿಂದ ಆತ ನಮ್ಮ ಅಂಗಡಿಗೆ ಬಂದು ವಸ್ತುಗಳನ್ನು ಖರೀದಿಸುತ್ತಿದ್ದರು ಎನ್ನುತ್ತಾರೆ. ನಮ್ಮ ಅಗಂಡಿ ಆರೋಪಿ ಯಾವ ಯಾವ ದಿನಾಂಕದಂದು ಬಂದು ಸದರಿ ವಸ್ತುಗಳನ್ನು ಖರೀದಿಸಿರುತ್ತಾರೆಂದು ನನಗೆ ಹೇಳಲು ಬರುವುದಿಲ್ಲ.

5. ನಮ್ಮ ಕುಟುಂಬಕ್ಕೆ ಸಂಬಧಿಸಿದ ಆಸ್ತಿಗಳು ಹಾವಣಗಿ ಗ್ರಾಮದಲ್ಲಿವೆ ಎಂದರೆ ಸರಿ. ನಮಂ ಕುಟುಂಬಕ್ಕೆ ಎಷ್ಟು ಇದೆ ಎಂದರೆ ನನಗೆ ಹೇಳಲು ಬರುವುದಿಲ್ಲ, ಆರೋಪಿ ಸಹ ಹಾವಣಗಿ ಗ್ರಾಮದವನು ಎಂದರೆ ಸರಿಯಲ್ಲ. ಆರೋಪಿ ಹಾಗೂ ನಾವು ಸಂಬಂಧಿಕರು ಎಂದರೆ ದೂರದ ಸಂಬಂಧಿಕರು ಇರಬಹುದು ಎನ್ನುತ್ತಾರೆ. ಆರೋಪಿ ಹಾಗೂ ನವು ಒಂದೇ ಸಮುದಾಯದವರು ಎಂದರೆ ಸರಿ. ಆರೋಪಿ ಯಾವ ಕೆಲಸ ಮಾಡುತ್ತಾರೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ ಆದರೆ ಕೃಷಿ ಮಾಡುತ್ತಾರೆ ಎನ್ನುತ್ತಾರೆ. ಆರೋಪಿ ಹೆಸರಿಗೆ ಎಷ್ಟು ಎಕರೆ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ.

6. ಆರೋಪಿ ಕೃಷಿ ಮಾಡುತ್ತಿದ್ದು ನಮ್ಮ ಅಂಗಡಿಗೆ ಬಂದು ಗೊಬ್ಬರ ಹಾಗೂ ಬೀಜ ಖರೀದಿ ಮಾಡಿರುತ್ತಾನೆ ಎಂದು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿ. ಆರೋಪಿ ಲಾವಣಿ ಆಧಾರದ ಮೇಲೆ ಕೃಷ್ಷಿ ಮಾಡುತ್ತಾನೆಂದು ನಾನು ಆತನಿಗೆ ನಮ್ಮ ವಕೀಲರ

ಮೂಲಕ ನೋಟಿಸು ನೀಡಿದ್ದೇನೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಆರೋಪಿ ಲಾವಣಿ ಆಧಾರದ ಮೇಲೆ ಜಮೀನು ಸಾಗುವಳಿ ಮಾಡುತ್ತಾನೆಂದು ನಾನು ದೂರಿನಲ್ಲಿ ಬರೆಯಿಸಿಲ್ಲ. ಯಾವ ಆಧಾರಂ ಮೇಲೆ ಆರೋಪಿಗೆ ಸದರಿ ಗೊಬ್ಬರ ನೀಡಿರುತ್ತವೆ ಎಂದರೆ ಸಾಕ್ಷಿ ಆರೊಪಿಯೇ ಕೃಷಿ ಭೂಮಿ ಇದೆ ಎಂದು ಹೇಳಿ ತೆಗೆದುಕೊಂಡು ಹೋಗಿದ್ದರು ಎನ್ನುತ್ತಾರೆ. ಆರೋಪಿ ಹೆಸರಿನಲ್ಲಿ ಎಷ್ಟು ಎಕರೆ ಜಮೀನು ಇದೆ ಎಂದು ಹಾಗೂ ಅದರ ಸರ್ವೆ ನಂಬರ ನನಗೆ ಹೇಳಲು ಬರುವುದಿಲ್ಲ. ಆರೋಪಿ ತನ್ನ ಜಮೀನಿನಲ್ಲಿ ಯಾವ ಬೆಳೆಯನ್ನು ಬೆಳೆಯುತ್ತಿದ್ದನು ಎಂಬುದವರ ಬಗ್ಗೆ ನನಗೆ ಗೊತ್ತಿಲ್ಲ.

7. ಆರೋಪಿ ಯಾವ ಯಾವ ದಿನಾಂಕದಂದು ನಮ್ಮ ಅಂಗಡಿಗೆ ಬಂದು ಎಷ್ಟು ಹಣದ ಯಾವ ಯಾವ ಗೊಬ್ಬರವನ್ನು ತೆಗೆದುಕೊಂಡು ಹೋಗಿದ್ದರು ಎಂದು ಈಗ ಹೇಸಲು ಬರುವುದಿಲ್ಲ ಆದರೆ ಸಾಕ್ಷಿ 14-15 ಬಾರಿ ನಮ್ಮ ಅಂಗಡಿಗೆ ಬಂದು ಗೊಬ್ಬರವನ್ನು ತೆಗೆದುಕೊಂಡು ಹೋಗಿರುತ್ತಾರೆ ಎನ್ನುತ್ತಾರೆ. ಯಾವ ಯಾವ ದಿನಾಂಕದಂದು ನಮ್ಮ ಅಂಗಡಿಗೆ ಆರೋಪಿ ಬಂದು ಗೊಬ್ಬರ ಖರೀದಿಸಿರುತ್ತಾರೆ ಎಂದು ದಿನಾಂಕ ನನಗೆ ನೆನಪಿಲ್ಲ. ಆರೋಪಿಗೆ 14-15 ಬಿಲ್ಲುಗಳ ಅಡಿಯಲ್ಲಿ ಗೊಬ್ಬರವನ್ನು ಮಾರಾಟ ಮಾಡಿರಬಹುದು ನಿಖರವಾಗಿ ಹೇಳಲು ಬರುವುದಿಲ್ಲ. ನನ್ನ ದೂರಿನಲ್ಲಿ 16 ಬಿಲ್ಲುಗಳ ಅಡಿಯಲ್ಲಿ ಆರೋಪಿಗೆ ರಸಗೊಬ್ಬರ ಮಾರಾಟ ಮಾಡಲಾಗಿತ್ತು ಎಂದು ನಮೂದಿಸಿರುವುದು ಸರಿಯಾಗಿದೆ. ಆರೋಪಿ ಹೆಚ್ಚಾಗಿ ಜೂನ್ ತಿಂಗಳಲ್ಲಿ ಬಿತ್ತನೆ ಬೀಜವನ್ನು ನಮ್ಮ ಅಂಗಡಿಯಿಂದ ಖರೀದಿಸಿಕೊಂಡು ಹೋಗಿದ್ದರು. ಸದರಿ ಬೀಜಗಳು ಯಾವುವು ಎಂದು ನನಗೆ ನೆನಪಿಲ್ಲ.

8. ಸಾಮಾನ್ಯವಾಗಿ ರೈತರು ನಮ್ಮ ಅಂಗಡಿಗೆ ಬೀಜ ಖರೀದಿಗಾಗಿ ಬಂದರೆ ಅವರ ಭೂಮಿಯ ಫಲವತ್ತತೆ ಹಾಗೂ ವಾತಾವರಣವನ್ನು ತಿಳಿದುಕೊಂಡು ಅವರಿಗೆ ಬೀಜ ನೀಡುತ್ತೇವೆ ಎಂದರೆ ಸರಿ ಸಾಕ್ಷಿ ಮುಂದುವರೊ ರೈತರು ಕೇಳಿದ ಬೀಜವನ್ನು ಸಹ ನೀಡುತ್ತೇವೆ ಎನ್ನುತ್ತಾರೆ. ಎಷ್ಟು ಮೌಲ್ಯದ ಬೀಜಗಳನ್ನು ಆರೋಪಿಗೆ ನೀಡಿರುತ್ತೇವೆ ಎಂದು ಈಗ ಹೇಳಲು ಬರುವುದಿಲ್ಲ. ಆರೋಪಿ ನಮ್ಮ ಅಂಗಡಿಯಿಂದ ಯಾವ ತರಹದ ರಸಗೊಬ್ಬರವನ್ನು ಖರೀದಿಸಿರುತ್ತಾರೆ ಎಂದು ಈಗ ಅದರ ಹೆಸರುಗಳನ್ನು ನನಗೆ ಹೇಳಲು ಬರುವುದಿಲ್ಲ. ಯಾವ ದಿನಾಂಕದಂದು ಎಷ್ಟು ಹಣದ ರಸಗೊಬ್ಬರ ಆರೋಪಿಗೆ ನೀಡಿಲಾಗಿದೆ ಎಂದು ಹೇಳಲು ಬರುವುದಿಲ್ಲ.

9. ನನ್ನ ದೂರಿನಲ್ಲಿ ನಮೂದಿಸಿದ ಅನುಕ್ರಮ ಸಂಖ್ಯೆ3 ರಸಗೊಬ್ಬರ ಖರೀದಿಯ ಮೊತ್ತ 44,200/- ಎಂದು ನಮೂದಿಸಿದ್ದು ಸದರಿ ರಸಗೊಬ್ಬರ ಯಾವುದು ಎಂದು ಈಗ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಅದೇ ರೀತಿ ಅನುಕ್ರಮ ಸಂಖ್ಯೆ4 ರಸಗೊಬ್ಬರ ಖರೀದಿಯ ಮೊತ್ತ 36,994/- ಎಂದು ನಮೂದಿಸಿದ್ದು ಸದರಿ ರಸಗೊಬ್ಬರ ಯಾವುದು ಎಂದು ಈಗ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಅದೇ ರೀತಿ ಅನುಕ್ರಮ ಸಂಖ್ಯೆ5 ರಸಗೊಬ್ಬರ ಖರೀದಿಯ ಮೊತ್ತ 47,670/- ಎಂದು ನಮೂದಿಸಿದ್ದು ಸದರಿ ರಸಗೊಬ್ಬರ ಯಾವುದು ಹಾಗೂ ಅದರ ತೂಕ ಎಷ್ಟು ಎಂದು ಈಗ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಸಾಕ್ಷಿ ಮುಂದುವರೆದು ನಮ್ಮ ಅಂಗಡಿಯ ದಾಖಲೆಗಳನ್ನು ನೋಡಿದರೆ ಹೇಳಬಲ್ಲೇ ಎನ್ನುತ್ತಾರೆ.

10. ಅದೇ ರೀತಿ ಅನುಕ್ರಮ ಸಂಖ್ಯೆ6 ರಲ್ಲಿ ರಸಗೊಬ್ಬರ ಮತ್ತು ಕ್ರಿಮಿನಾಶಕ ಔಷಧಿ ಖರೀದಿಯ ಮೊತ್ತ 49,600/- ಎಂದು ನಮೂದಿಸಿದ್ದು ಸದರಿ ರಸಗೊಬ್ಬರ ಹಾಗೂ ಕ್ರಿಮಿನಾಶಕ ಯಾವುದು ಎಂದು ಮತ್ತು ಅದನ್ನು ಯಾವ ಬೆಳೆಗಾಗಿ ಖರೀದಿಸಿರುತ್ತಾರೆ ಎಂದು ಈಗ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಸಾಕ್ಷಿ ಮುಂದುವರೆದು ನಮ್ಮ ಅಂಗಡಿಯ ಬಿಲ್ಲುಗಳನ್ನು ನೋಡಿದರೆ ಹೇಳಬಲ್ಲೇ ಎನ್ನುತ್ತಾರೆ. ಅದೇ ರೀತಿ ಅನುಕ್ರಮ ಸಂಖ್ಯೆ 7 ರಸಗೊಬ್ಬರ ಖರೀದಿಯ ಮೊತ್ತ 45,570/- ಎಂದು ನಮೂದಿಸಿದ್ದು ಸದರಿ ರಸಗೊಬ್ಬರ ಅಡಿಯಲ್ಲಿ ಎಷ್ಟು ಬ್ಯಾಗ ಮತ್ತು ಅದು ಯಾವುದು ಎಂದು ಈಗ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಸಾಕ್ಷಿ ಮುಂದುವರೆದು ಬಿಲ್ಲುಗಳನ್ನು ನೋಡಿದರೆ ಹೆಳಬಲ್ಲೇ ಎನ್ನುತ್ತಾರೆ.

11. ಸದರಿ ನನ್ನ ದೂರಿನಲ್ಲಿ ಒಟ್ಟಾಗಿ 16 ಬಾರಿ ರಸಗೊಬ್ಬರ ಹಾಗೂ ಬೀಜ ಖರೀದಿಯನ್ನು ಆರೋಪಿ ನಮ್ಮ ಅಂಗಡಿಯಿಂದ ಮಾಡಿರುತ್ತಾರೆ ಎಂದು ನಮೂದಿಸಿದ್ದು ಸದರಿ ಖರೀದಿ ಯಾವ ದಿನಾಂಕದಂದು ಎಷ್ಟು ಮೊತ್ತಕ್ಕೆ ಮಾಡಿರುತ್ತಾರೆಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ ಸಾಕ್ಷಿ ಮುಂದುವರದು 2024-25 ನೇ ಸಾಲಿನಲ್ಲಿ ಖರೀದಿಸಿರುತ್ತಾರೆ ಎನ್ನುತ್ತಾರೆ. 2025 ನೇ ಸಾಲಿನಲ್ಲಿಯೂ ಆತ ರಸಗೊಬ್ಬರ ಖರೀದಿಸಿದ್ದು ಅದರ ದಿನಾಂಕವನ್ನು ಸಹ ನನಗೆ ಈಗ ಹೇಳಲು ಬರುವುದಿಲ್ಲ.

12. ಈ ಪ್ರಕರಣಕ್ಕೆ ಅನುಕೂಲವಾಗಲೆಂದು ನಿಪಿ-7 ಬ್ಯಾಲನ್ಸ ಶೀಟನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಆರೋಪಿ ನಮ್ಮ ಅಂಗಡಿಯಿಂದ ಖರೀದಿಸಿದ ರಸಗೊಬ್ಬರ ಹಾಗೂ ಬೀಜಕ್ಕೆ ಸಂಬಂಧಿಸಿದ ಬಿಲ್ಲುಗಳನ್ನು ಹಾಜರು

ಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ಮೂಲ ಬಿಲ್ಲಿನ ಪ್ರತಿಯನ್ನು ರೈತರಿಗೆ ನೀಡಿರುತ್ತೇವೆ ಒಂದು ಪ್ರತಿ ನಮ್ಮ ಅಂಗಡಿಯಲ್ಲಿ ಇರುತ್ತದೆ ಅದನ್ನು ಹಾಜರು ಪಡಿಸಬಲ್ಲೇ ಎನ್ನುತ್ತಾರೆ. ನಮ್ಮ ಅಂಗಡಿಯಲ್ಲಿ ಬಿಲ್ಲ ಬುಕ್ ಇರುತ್ತದೆ ಎಂದರೆ ಸಾಕ್ಷಿ ನಾವು ಬಿಲ್ ಬುಕ್ ನಿರ್ವಹಿಸುವುದಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ನಾವು ಕಂಪ್ಯೂಟರಸೈಡ ಬಿಲ್ಲ ನೀಡುತ್ತೇವೆ ಎನ್ನುತ್ತಾರೆ.

13. ಸದರಿ ನಮ್ಮ ಅಂಗಡಿಯಿಂದ ವಿತರಿಸಿದ ರಸಗೊಬ್ಬರ ಹಾಗೂ ಬೀಜಕ್ಕೆ ಸಂಬಂಧಿಸಿದಂತೆ ನಾವು ಸರಕಾರಕ್ಕೆ ಜಿ ಎಸ್ ಟಿ ಕಟ್ಟುತ್ತೇವೆ ಎಂದರೆ ಸರಿ. ಹಾಗೂ ನಾವು ಪ್ರತಿ ವರ್ಷ ನಮ್ಮ ಅಂಗಡಿಯ ಅಡಿಟ್ ಮಾಡಿಸುತ್ತೇವೆ ಎಂದರೆ ಸರಿ. ಸದರಿ ಅಡಿಟ್ ಅಡಿಯಲ್ಲಿ ವರ್ಷ ಪೂರ್ತಿ ರೈತರಿಗೆ ಕ್ರಯಕ್ಕೆ ನೀಡಿದ ರಸಗೊಬ್ಬರ ಹಾಗೂ ಬೀಜ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ಆ ಬಗ್ಗೆ ದೂರಿನಲ್ಲಿ ಬರೆಯಿಸಿಲ್ಲ.

14. ಆರೋಪಿ ನಮಗೆ ಒಟ್ಟಾಗಿ 6,88,217/- ರೂ. ಗಳನ್ನು ನೀಡಬೇಕಾಗಿರುತ್ತದೆ. ಸಾಕ್ಷಿ ಮುಂದುವರೆದು ಚೆಕ್ ನಲ್ಲಿ 6,80,000/-ನಮೂದು ಇದೆ ಎನ್ನುತ್ತಾರೆ. ನಾನು ಆರೋಪಿಗೆ ನೀಡಿದ ನೋಟಿಸಿನಲ್ಲಿ ಆತನಿಂದ 6,88,217/- ರೂಪಾಯಿ ಬರಬೇಕಾಗಿದೆ ಎಂದು ನಮೂದಿಸಿರುತ್ತೇನೆ. ದೂರಿನಲ್ಲಿಯೂ ಸಹ ಆರೋಪಿಯಿಂದ ನನಗೆ 6,88,217/- ಬರಬೇಕಾಗಿದೆ ಎಂದು ನಮೂದಿಸಿರುತ್ತೇನೆ ಸಾಕ್ಷಿ ಮುಂದುವರೆದು ಆದರೆ ಚೆಕ್ 6,80,000/- ಗಳಿಗೆ ಮಾತ್ರ ಇದೆ ಎನ್ನುತ್ತಾರೆ

15. ಸದರಿ ನಮ್ಮ ಬಸವೇಶ್ವರ ಕೃಷ್ಟಿ ಕೇಂದ್ರ ಅಂಗಡಿಯಲ್ಲಿ ರಿಟೆಲ್ ವ್ಯಾಪಾರ ಮಾಡುತ್ತೇವೆ. ಹೋಲಸೆಲ್ ವ್ಯಾಪಾರ ಹಾಗೂ ರಿಟೆಲ್ ವ್ಯಾಪಾರಕ್ಕೆ ವ್ಯತ್ಯಾಸ ಇದೆ ಎಂದರೆ ಸರಿ. ಆರೋಪಿ ನಮ್ಮ ಅಂಗಡಿಂಗೆ ಯಾವತ್ತು ಬಂದಿಲ್ಲ ಹಾಗೂ ನಮಂ ಅಂಗಡಿಯಿಂದ ಗೊಬ್ಬರ, ಕ್ರಿಮಿನಾಶಕ ಮತ್ತು ಬೀಜ ಖರಿದಿಸುವ ಪ್ರಸಂಗ ಆತನಿಗೆ ಯಾವತ್ತು ಬಂದಿಲ್ಲ ಎಂದರೆ ಸರಿಯಲ್ಲ. ಆರೋಪಿ ಒಕ್ಕಲುತನ ಮಾಡುವುದಿಲ್ಲ ಹಾಗೂ ಆತ ಯಾವುದೇ ಜಮೀನು ಹೊದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಆತ ನಮ್ಮ ಅಂಗಡಿಯಿಂದ ರಸಗೊಬ್ಬರ, ಕ್ರಿಮಿನಾಶಕ ಮತ್ತು ಬೀಜ ಖರಿದಿಸುವ ಪ್ರಸಂಗ ಬರುವುದಿಲ್ಲ ಎಂದರೆ ಸರಿಯಲ್ಲ.

16. ಆರೋಪಿ ನೀಡಿದ ಚೆಕ್ ಸಂಖ್ಯೆ 844099 ಆಗಿರುತ್ತದೆ. ಅದನ್ನು ಆತ ದಿನಾಂಕ 06.10.2025 ರಂದು ನೀಡಿರುತ್ತಾನೆ. ಸದರಿ ಚೆಕ್ ನ್ನು ನಾನು ಕರ್ನಾಟಕ ಬ್ಯಾಂಕ್ ಅಕ್ಕಿ ಅಲೂರು ಶಾಖೆ ಮುಖಾಂತರ ನಗದೀಕರಣಕ್ಕಾಗಿ ಸಲ್ಲಿಸಿದ್ದೆ. ಸದರಿ ಚಕ್ ಆರೋಪಿಯ

ಕೆನರಾ ಬ್ಯಾಂಕ್ ಗೆ ಸಂಬಂಧಿಸಿದ ಚೆಕ್ ಆಗಿರುತ್ತದೆ. ಆರೋಪಿ ಎಷ್ಟು ಶಾಲೆ ಕಲಿತಿದ್ದಾನೆ ಎಂದು ನನಗೆ ಗೊತ್ತಿಲ್ಲ. ಸದರಿ ಚೆಕ್ ನಲ್ಲಿ ಮೊತ್ತವನ್ನು ಹಾಗೂ ದಿನಾಂಕವನ್ನು ನಾನೇ ನನಗೆ ಅನುಕೂಲವಾಗುವ ರೀತಿಯಲ್ಲಿ ಬರೆದುಕೊಂಡು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಿಪಿ-1 ಚೆಕ್ ನಲ್ಲಿ ಇರುವ ಬರವಣಿಗೆ ಆರೊಪಿಯದ್ದು ಅಲ್ಲ ಎಂದರೆ ಸರಿಯಲ್ಲ. ಸದರಿ ಬರವಣಿಗೆಯನ್ನು ನಾನೇ ಮಾಡಿರುತ್ತೇನೆಂದರೆ ಸರಿಯಲ್ಲ.

17. ನನ್ನ ದೂರಿನಲ್ಲಿ 6,88,217/- ರೂಪಾಯಿ ಆರೋಪಿಯಿಂದ ಬರಬೇಕಾಗಿದೆ ಎಂದು ಬರೆದಿದ್ದು ಚೆಕ್ ನ ಮೇಲೆ 6,80,000/- ರೂಪಾಯಿ ಎಂದು ಬರೆದಿದ್ದು ಚೆಕ್ ನ ಮೇಲೆ ಬರೆದಿರುವುದು ಸರಿಯಾಗಿದೆ. ನಾನು ದಿನಾಂಕ 11.11.2025 ರಂದು ಆರೋಪಿಗೆ ನೋಟಿಸು ನೀಡಿಸಿರುತ್ತೇನೆ. ಸದರಿ ನಾನು ನೀಡಿದ ನೋಟಿಗೆ ಆರೋಪಿ ದಿನಾಂಕ 18.11.2025 ರಂದು ಆತ ನಮ್ಮ ಅಂಗಡಿಯಿಂದ ಯಾವುದೇ ರಸಗೊಬ್ಬರ ಖರಿದಿಸಿಲ್ಲ ಹಾಗೂ ಆತ ನಮಗೆ ಯಾವುದೇ ಹಣ ಕೊಡಬೇಕಾಗಿಲ್ಲ ಎಂದು ಪ್ರತ್ಯುತ್ತರ ನೀಡಿರುತ್ತಾನೆಂದರೆ ಸರಿ. ಸಾಕ್ಷಿ ಮುಂದುವರೆದು ಆತ ಸುಳ್ಳು ಪ್ರತ್ಯುತ್ತರ ನೀಡಿರುತ್ತಾನೆ ಎನ್ನುತ್ತಾರೆ.

18. ಬಸನಗೌಡ ಸಿದ್ದಬಸನಗೌಡ ಪಾಟೀಲ ನನಗೆ ಚಿಕ್ಕಪ್ಪ ಆಗಬೇಕು. ಆತ ಈಗ ಸಧ್ಯ ಬೆಳಗಾವಿಯಲ್ಲಿ ವಾಸವಾಗಿದ್ದಾರೆ. ಸದರಿಯವರು ಹಾವಣಗಿಯಲ್ಲಿ ಆಸ್ತಿ ಹೊಂದಿದ್ದಾರೆ. ಸದರಿ ಹಾವಣಗಿಯಲ್ಲಿರುವ ನಮ್ಮ ಹಾಗೂ ನನ್ನ ಚಿಕ್ಕಪ್ಪರವರ ಆಸ್ತಿಗಳು ನಮ್ಮ ಹಾಗೂ ನಮ್ಮ ಚಿಕ್ಕಪ್ಪರವರ ಜಂಟಿಯಾಗಿವೆ ಎಂದರೆ ಸರಿ. ನಾವು ಹಾಗೂ ನಮ್ಮ ಚಿಕ್ಕಪ್ಪ ಹಾವಣಗಿಯಲ್ಲಿ ಒಂದೇ ಮನೆಯಲ್ಲಿ ವಾಸವಾಗಿದ್ದೇವೆ ಎಂದರೆ ಸಾಕ್ಷಿ ನಾವು ಅಕ್ಕಿ ಆಲೂರಿನಲ್ಲಿ ವಾಸವಾಗಿದ್ದೇವೆ ಎನ್ನುತ್ತಾರೆ. ಸದರಿ ನನ್ನ ಚಿಕ್ಕಪ್ಪ ಬಸನಗೌಡ ಸಿದ್ದಬಸನಗೌಡ ಪಾಟೀಲ ರವರಿಗೆ ಆರೋಪಿ ರೂ.1,49,000/- ನೀಡಬೇಕಾಗಿದ್ದು ಸದರಿ ಹಣ ಮರುಪಾವತಿಯ ಭದ್ರತೆಗಾಗಿ ಆರೋಪಿ ತನ್ನ ಚೆಕ್ ನ್ನು ಸದರಿ ನನ್ನ ಚಿಕ್ಕಪ್ಪನ ಬಳಿ ನೀಡಿದ್ದ ಎಂದರೆ ಸರಿಯಲ್ಲ. ಸದರಿ ಚೆಕ್ ನ್ನು ಭದ್ರತೆಗಾಗಿ ಆರೋಪಿ ನನ್ನ ಚಿಕ್ಕಪ್ಪನಿಗೆ 2022 ನೇ ಸಾಲಿನಲ್ಲಿ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಚೆಕ್ ನ್ನು ಆರೋಪಿ ತನ್ನ ಸಹಿ ಮಾತ್ರ ಮಾಡಿ ಉಳಿದ ಬರವಣಿಗೆ ಮಾಡದೇ ನೀಡಿದ್ದ ಎಂದರೆ ಸರಿಯಲ್ಲ. ಸದರಿ ಚೆಕ್ ನ್ನು ನಾವು ದುರುಪಯೋಗ ಪಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಬಸನಗೌಡ ಪಾಟೀಲ ನನ್ನಿಂದ ಈ ಪ್ರಕರಣವನ್ನು ದಾಖಲಿಸಿ ಆತ ಈಗ ತನ್ನ ಮನೆಯಲ್ಲಿ ಬಳಗಾವಿಯಲ್ಲಿ ವಾಸವಾಗಿದ್ದಾನೆ ಎಂದರೆ ಸರಿಯಲ್ಲ. ನಮಂ ಕುಟಜಂಬದ ಆಸ್ತಿಗಳಿಗೆ

ಸಂಬಂಧಿಸಿದಂತೆ ಸುರೇಶಗೌಡ ಪಾಟೀಲ ರವರು ಹಿಸ್ಸೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಇರಬಹುದು.

19. ನಮ್ಮ ಅಂಗಡಿಯಲ್ಲಿ ಸಿ ಸಿ ಟಿ ವಿ ಕ್ಯಾಮೆರಾ ಇದೆ ಎಂದರೆ ಸರಿ. ಸದರಿ ಸಿ ಸಿ ಟಿ ವಿ ಕ್ಯಾಮೆರಾ ಅಳವಡಿಸಿ 6-7 ವರ್ಷಗಳು ಕಳೆದಿವೆ. ಸದರಿ ಸಿ ಸಿ ಟಿ ವಿ ಕಾಮೆರಾದಲ್ಲಿ ಆರೋಪಿ ನಮ್ಮ ಅಂಗಡಿಗೆ ಬಂದ ಬಗ್ಗೆ ರೆಕಾರ್ಡಿಂಗ ಇರುತ್ತದೆ ಎಂದರೆ ಸಾಕ್ಷಿ 15 ದಿನಗಳ ರೆಕಾರ್ಡಿಂಗ ಮಾತ್ರ ಇರುತ್ತದೆ ಅದರ ಹಿಂದಿನ ಅವಧಿಯ ರೆಕಾರ್ಡ ಇರುವುದಿಲ್ಲ ಎನ್ನುತ್ತಾರೆ. ಆರೋಪಿ ನಮ್ಮ ಅಂಗಡಿಯಿಂದ ಯಾವುದೇ ರಸಗೊಬ್ಬರ ವೆಗೈರೆ ಖರೀದಿ ಮಾಡದೇ ಇದ್ದರು ಸಹ ನಾವು ಹಾಗೂ ನಮ್ಮ ಚಿಕ್ಕಪ್ಪ ಸೇರಿ ಆರೋಪಿಯ ಮೇಲೆ ಹಗೆತನ ಸಾಧಿಸುವ ಉದ್ದೇಶದಿಂದ ಆತನ ಚೆಕ್ ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆರೋಪಿಯ ತಂದೆ ವಿರುಪಾಕ್ಷಗೌಡ ಪಾಟೀಲ ಸದರಿ ಹಿಸ್ಸೆ ದಾವೆಯಲ್ಲಿ ನಮ್ಮ ವಿರುದ್ದ ಸಾಕ್ಷ್ಯ ನುಡಿದಿರುತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಮ್ಮ ಮಿರದ್ದ ಆರೋಪಿಯ ತಂದೆ ಹಿಸ್ಸೆ ದಾವೆಯಲ್ಲಿ ಸಾಕ್ಷ್ಯ ನುಡಿದಿದ್ದರಿಂದ ಅವರ ಮೇಲೆ ಹಗೆತನ ಸಾಧಿಸುವ ಉದ್ದೇಶದಿಂದ ಆರೋಪಿಯ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರರಕಣ ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

Sd/-

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಸಾಕ್ಷಿಧಾರರ ಸಹಿ ಮತ್ತು ಜೆ.ಎಂ.ಎಫ್.ಸಿ, ಹಾನಗಲ್